Criminal Prosecutions withdrawn in Chitaldrug in 1957.

Q.—1052. Sri B. S. SHANKARAPPA (Hosadurga).—

Will the Government be pleased to state:—

(*a*) whether any criminal prosecutions were withdrawn in Chitaldrug District between 1st January and 8th March 1957;

(*b*) if so, the names of persons against whom they were launched and withdrawn?

A.—Sri C. M. POONACHA (Minister for Home Affairs and Industries).—

(*a*) Yes.

(*b*) Two cases were withdrawn in Chitaldrug Division during the period in question.

(i) The case in Cr. No. 99/56, under section 16 read with 19 (1) of Indian Arms Act launched against Devadanarayana Reddy was withdrawn on 31st January 1957.

(ii) The case in Cr. No. 56/56, under section 409, I.P.C., of Challakere Kasaba Police Station launched against Patel Veeranna was withdrawn on 31st January 1957.

ಶ್ರೀ ಬಿ. ಎಸ್. ಶಂಕರಪ್ಪ.—ಈ ಕೇಸುಗಳನ್ನು ಪೋಲೀಸ್‌ನವರು ಹಾಕಿದಮೇಲೆ ಜಿಲ್ಲಾಧಿಕಾರಿಗಳ ಅಪ್ಪಣೆ ಪಡೆದು ವಾಪಸು ತೆಗೆದುಕೊಂಡಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಜಿಲ್ಲಾಧಿಕಾರಿಗಳಿಗೇ ವಾಪಸು ತೆಗೆದುಕೊಳ್ಳುವುದಕ್ಕೆ ಅಧಿಕಾರ ಇರುವುದು.

ಶ್ರೀ ಬಿ. ಎಸ್. ಶಂಕರಪ್ಪ.—ಹಾಗಾದರೆ ವಾಪಸು ತೆಗೆದುಕೊಳ್ಳುವುದಕ್ಕೆ ಕಾರಣವೇನು?

ಶ್ರೀ ವೀರೇಂದ್ರ ಪಾಟೀಲ್.—ಈ ಎರಡು ಕೇಸ್‌ಗಳನ್ನು ವಾಪಸು ತೆಗೆದು ಕೊಳ್ಳಲಾಗಿದೆ. ಒಂದು ಕೇಸು ದೇವದ ನಾರಾಯಣ ರೆಡ್ಡಿ ಅವರ ಮೇಲೆ ಇತ್ತು. ಅವರು ಲೈಸೆನ್ಸ್ ಎಕ್ಸ್‌ಪೈರ್ ಆದಮೇಲೆ ರಿವಾಲ್ವರನ್ನು ಡಿಪಾಸಿಟ್ ಮಾಡಲಿಲ್ಲ ಎಂದು ಚಾರ್ಜು ಇತ್ತು. ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅನಂತರ ರಿವಾಲ್ವರ್ ಲೈಸೆನ್ಸನ್ನು ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ನಿಂದ ರಿನ್ಯೂ ಮಾಡಿ ಕೇಸನ್ನು ಹಿಂದಕ್ಕೆ ತೆಗೆದು ಕೊಂಡಿದ್ದಾರೆ. ಪಟೇಲ್ ವೀರಣ್ಣನವರ ಮೇಲೆ 90 ರೂಪಾಯಿ ಸರ್ಕಾರದ ಟ್ರೆಜರಿಗೆ ದಾಖಲು ಮಾಡಲಿಲ್ಲ ಎಂದು ಚಾರ್ಜು ಇತ್ತು. ಅನಂತರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ dishonest intention ಇರಲಿಲ್ಲ ಎಂದು ತೀರ್ಪು ಕೊಟ್ಟಮೇಲೆ ಅದನ್ನು ವಾಪಸು ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಎಸ್. ಶಂಕರಪ್ಪ.—ಹಾಗಾದರೆ ಪೋಲೀಸ್‌ನವರು ಕೇಸು ಹಾಕಬೇಕಾದರೆ ಇವುಗಳನ್ನೆಲ್ಲಾ ಪತ್ತೆ ಹಚ್ಚಿ ತಾನೆ ಕೇಸು ಹಾಕುವುದು?

ಶ್ರೀ ವೀರೇಂದ್ರ ಪಾಟೀಲ್.—ಪೋಲೀಸ್‌ನವರೇ ಅಮರ್ಚಾರರ ಆರ್ಡರ್ ಪ್ರಕಾರ ಕೇಸು ಹಾಕಿದ್ದಾರೆ. ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೇ ಅಧಿಕಾರ ಇರುವುದು. ಆದ್ದರಿಂದ ಅವರು ಎಲ್ಲವನ್ನೂ ತನಿಖೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಆಗ ಚುನಾವಣೆ ನಡೆಯುತ್ತಾ ಇತ್ತು. ಅಲ್ಲಿ ಆಗ ಇದ್ದಂಥ ಒಬ್ಬ ಕಾಂಗ್ರೆಸ್ ಅಭ್ಯರ್ಥಿ ತಮ್ಮ ಪ್ರಭಾವವನ್ನು ಉಪಯೋಗಿಸಿ ಈ ಕೇಸುಗಳನ್ನು ವಾಪಸು ತೆಗೆದುಕೊಳ್ಳುವಂತೆ ಮಾಡಿದ್ದು ಗೊತ್ತೇ?

ಶ್ರೀ ವೀರೇಂದ್ರ ಪಾಟೀಲ್.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ಹೈ ಕೋರ್ಟಿನವರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇನ್‌ವೆಸ್ಟಿಗೇಟ್ ಆಗಿ ಕೇಸುಗಳನ್ನು ವಾಪಸು ತೆಗೆದುಕೊಳ್ಳುತ್ತಾ ಇದ್ದಾರೆ, ಆ ರೀತಿ ವಾಪಸು ತೆಗೆದುಕೊಳ್ಳಬಾರದು ಎಂದು ಹೇಳಿರುವುದು ತಮಗೆ ಗೊತ್ತೇ?

Mr. SPEAKER.—Order, order. That is outside the scope of the question.

ಶ್ರೀ ಜಿ.ಎಚ್. ಪುಟ್ಟಣ್ಣ.—409ನೆಯ ಸೆಕ್ಷನ್ ಪ್ರಕಾರ ಡಿಪಾಸಿಟ್ ಮಾಡಬೇಕಾಗಿದ್ದ 90 ರೂಪಾಯಿಗಳನ್ನು ಎಷ್ಟು ದಿವಸ ದುರುಪಯೋಗ ಮಾಡಿದರು ಅಥವಾ ಎಷ್ಟು ದಿವಸದವರೆಗೂ ಖಜಾನೆಗೆ ಕಟ್ಟಲಿಲ್ಲ?

ಶ್ರೀ ವೀರೇಂದ್ರ ಪಾಟೀಲ್.—ಆ ಸಮಾಚಾರ ಇಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ಹಾಗಿದ್ದ ಮೇಲೆ 90 ರೂಪಾಯಿಗಳನ್ನು ಕಟ್ಟಿರಲಿಲ್ಲ ಎಂದು ಹೇಗೆ ಹೇಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ಅಡಿಷನಲ್ ಮ್ಯಾಜಿಸ್ಟ್ರೇಟರ ಇನ್‌ಕ್ವೈರಿನಲ್ಲಿ ಹಣ ಕಟ್ಟಿರಲಿಲ್ಲ ಎಂದು ಸಾಬೀತಾಗಿದೆ.

ಶ್ರೀ ಜಿ. ವೆಂಕಟೇಗೌಡ.—(ಬ) (i)ರ ಕೇಸ್‌ನಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆದು ಪ್ರಾಸಿಕ್ಯೂಷನ್ ಕೇಸ್ ಹಾಕಿದರೇ?

ಶ್ರೀ ವೀರೇಂದ್ರ ಪಾಟೀಲ್.—ಆ ಸಮಾಚಾರ ನನ್ನಲ್ಲಿ ಇಲ್ಲ.

ಶ್ರೀ ಜಿ. ವೆಂಕಟೇಗೌಡ.—ತನಿಖೆ ಮಾಡಿದ ಕಾಲಕ್ಕೆ ತಪ್ಪಿತನ್ಮರಲ್ಲ ಎಂದು ಕಂಡು ಬಂದ ಮೇಲೆ ಪೋಲೀಸಿನವರು ಪ್ರಾಸಿಕ್ಯೂಷನ್ ಹಾಕುವುದರ ಉದ್ದೇಶವೇನು?

ಶ್ರೀ ವೀರೇಂದ್ರ ಪಾಟೀಲ್.—ಪೋಲೀಸಿನವರು ಕೇಸು ಹಾಕಿರಬಹುದು. ಲೈಸೆನ್ಸ್ ರಿಟ್ರಾಸ್ಪೆಕ್ಟಿವ್ ಇಫೆಕ್ಟ್‌ನಿಂದ ರಿನ್ಯೂ ಮಾಡುವುದಕ್ಕೆ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅಧಿಕಾರವಿದೆ.

ಶ್ರೀ ಯು. ಎಂ. ಮಾದಪ್ಪ.—ಅಮರ್ಚಾರರು ಈ ರೀತಿ ರೋಪವಾಗಿದೆ ಎಂದು ವರದಿ ಮಾಡಿದ ಮೇಲೆ ತಾನೆ ಪೋಲೀಸಿನವರು ಕಾರ್ಯಕ್ರಮ ತೆಗೆದು ಕೊಂಡಿದ್ದು?

ಶ್ರೀ ವೀರೇಂದ್ರ ಪಾಟೀಲ್.—ಹೌದು. ಅಡಿಷನಲ್ ಮ್ಯಾಜಿಸ್ಟ್ರೇಟರು ತನಿಖೆ ಮಾಡಿ dishonest intention ಇರಲಿಲ್ಲ ಎಂದು ತೀರ್ಪು ಕೊಟ್ಟರು.

Sri V. S. PATIL.—Sir, when a case is filed before a court, it is the business of the court to see whether there is criminal intention or not. How did

(SRI V. S. PATIL)
this Additional District Magistrate interfere in this case?

Sri VEERENDRA PATIL.—Additional District Magistrate has got the power to withdraw cases, Sir.

ಶ್ರೀ ಜಿ. ವೆಂಕಟೇಗೌಡ.—ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೇ ಕೇಸು ಪಾಪಸು ತೆಗೆದುಕೊಳ್ಳಿ ಎಂದು ಹೇಳಿದರೇ ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಆ ಸಮಾಚಾರ ಇಲ್ಲ.

ಶ್ರೀ ಕೆ. ಕೆಂಚಪ್ಪ.—ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಾಸಿಕ್ಯೂಟ್ ಮಾಡಬೇಕು ಎಂದು ಆರ್ಡರ್ ಕೊಡುವಾಗ ಕ್ರಿಮಿನಲ್ ಇಂಟೆಂಟ್ ಇರಲಿಲ್ಲ ಎಂದು ಗೊತ್ತಿಲ್ಲದೇ ಕೊಟ್ಟಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಎರಡು ಕೇಸು ಇವೆ. ಅದು ಕಂಫ್ಯೂಸ್ ಆಗುತ್ತ ಇದೆ. ಒಂದನೆಯದರಲ್ಲಿ ಆರಮ್ಸ್ ಆಕ್ಟ್ ಪ್ರಕಾರ ಅವರ ಪರ್ಮಿಷ್ಷ ಅವಶ್ಯಕವಾಗಿ ಬೇಕಾಗುತ್ತದೆ. ಎರಡನೆಯ ಕೇಸ್‌ನಲ್ಲಿ ಇಲ್ಲ.

ಶ್ರೀ ಕೆ. ಕೆಂಚಪ್ಪ.—409ನೆಯ ಸೆಕ್ಷನ್ ಪ್ರಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಾಸಿಕ್ಯೂಷನ್ ಮಾಡುವುದಕ್ಕೆ ಅನುಮತಿ ಕೊಡುವಾಗ ಕ್ರಿಮಿನಲ್ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎನ್ನುವುದರಲ್ಲಿ ಅವನ ಉದ್ದೇಶ ಏನಿತ್ತು ಎಂಬುದು ಗೊತ್ತಾಗದೇ ಪ್ರಾಸಿಕ್ಯೂಷನ್ ಆರ್ಡರ್ ಕೊಟ್ಟಿದ್ದರೇ ಎಂದು?

ಶ್ರೀ ವೀರೇಂದ್ರ ಪಾಟೀಲ್.—ಮೊದಲನೆ ಕೇಸ್‌ನಲ್ಲಿ ಆರಮ್ಸ್ ಆಕ್ಟ್ ಪ್ರಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಪರ್ಮಿಷ್ಷ ಬೇಕಾಗುತ್ತದೆ. ಎರಡನೆಯ ಕೇಸ್‌ನಲ್ಲಿ ಅಮಲ್ದಾರರ ಆರ್ಡರ್ ಪ್ರಕಾರ ಕೇಸು ರಿಜಿಸ್ಟರ್ ಮಾಡಲಾಯಿತು. ಅನಂತರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತನಿಖೆ ಮಾಡಿ, ಅವನದು dishonest intention ಇರಲಿಲ್ಲ ಎಂದು ತೀರ್ಪು ಕೊಟ್ಟರು. ಆ ಮೇಲೆ ಕೇಸು ಪಾಪಸು ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಕೆಂಚಪ್ಪ.—ಸಬ್ ಡಿವಿಜ಼ನ್ ಆಫೀಸರು ಅನುಮತಿ ಕೊಡದೆ ಪ್ರಾಸಿಕ್ಯೂಟ್ ಮಾಡುವುದಕ್ಕಾಗುವುದಿಲ್ಲವೆಂದು ಗೊತ್ತಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಹತ್ತಿರ ಇರುವ ಸಮಾಚಾರದ ಪ್ರಕಾರ ಅಮಲ್ದಾರರ ಆಜ್ಞೆಪ್ರಕಾರ ಕೇಸು ರಿಜಿಸ್ಟರ್ ಆಗಿದೆ ಎಂದಿದೆ.

ಶ್ರೀ ಕೆ. ಕೆಂಚಪ್ಪ.—ಸಬ್ ಡಿವಿಜ಼ನ್ ಆಫೀಸರು ಮ್ಯಾಜಿಸ್ಟ್ರೇಟರಾಗಿದ್ದೂ ಪ್ರಾಸಿಕ್ಯೂಷನ್ ಮಾಡುವುದಕ್ಕೆ ಅಧಿಕಾರವನ್ನೂ ಕೊಡದೆ ಪ್ರಾಸಿಕ್ಯೂಟ್ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವಾಗ criminal intention ಇಲ್ಲವೆಂದು ಬಿಡುವುದಕ್ಕೆ ಹೇಗಾಗುತ್ತದೆ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ ಪ್ರಕಾರ ಅಮಲ್ದಾರರ ಆರ್ಡರ್ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಲಾಯಿತು. ಕೇಸು ರಿಜಿಸ್ಟರ್ ಆದ ಮೇಲೆ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇದರಲ್ಲಿ dishonest intention ಇಲ್ಲವೆಂದು ತೀರ್ಪುಕೊಟ್ಟು ಕೇಸನ್ನು ಪಾಪಸು ತೆಗೆದುಕೊಂಡಿದ್ದಾರೆ.

Amount allotted under Second Five-Year Plan in Channapatna Taluk.

Q.—574. Sri B. K. PUTTARAMIYA (Channapatna).—

Will the Government be pleased to state :—

(*a*) the amounts that have been provided under the Second Five-Year Plan under various heads to the Channapatna Taluk ;

(*b*) the action they have taken for the implementation of the schemes proposed in the Second Five-Year Plan for the said taluk ?

A.—Sri S. NIJALINGAPPA (Chief Minister).—

(*a*) The District and Taluk Plans have not been prepared yet.

(*b*) Does not arise in view of the answer to (*a*) above.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—(ಎ) ಭಾಗಕ್ಕೆ ಉತ್ತರವಾಗಿ 'District and Taluk Plans have not been prepared yet' ಎಂದು ಹೇಳಿದ್ದಾರೆ. ಈ ಯೋಜನೆಗಳನ್ನು ತಯಾರು ಮಾಡುವವರು ಯಾರು?

ಶ್ರೀ ಆರ್. ಎಂ. ದೊಡ್ಡಮನೆ ಹೆಗ್ಗಡೆ.—ಸಂಬಂಧಪಟ್ಟ ಅಧಿಕಾರಿಗಳು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅವರು ತಯಾರು ಮಾಡದೆ ಇದ್ದರೆ, partiality ಮಾಡಿದರೆ, ಅದಕ್ಕೆ ಮುಂದಿನ ಕಾರ್ಯ ಏನು ಮಾಡಬೇಕು?

ಶ್ರೀ ಆರ್. ಎಂ. ದೊಡ್ಡಮನೆ ಹೆಗ್ಗಡೆ.—ಸಾರ್ವಜನಿಕರ ಅಭಿಪ್ರಾಯವನ್ನೂ ಕೂಡ, ಈ ಯೋಜನೆಗಳನ್ನು ತಯಾರು ಮಾಡುವಾಗ ಪಡೆಯಬೇಕೆಂದು ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ.

Persons that took part and were convicted in the Satyagraha at Belgaum.

Q.—607 Sri V. S. PATIL (Belgaum I).—

Will the Government be pleased to state :—

(*a*) the number of persons, that took part in Satyagraha sponsored by the Maharashtra Ekikarana Samiti at Belgaum since 9th March 1956 ;

(*b*) the number of them that were sentenced to pay fine or to undergo imprisonment ;